ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

## ಉಪಸಭಾಪತಿಗೆ ಪುಸ್ತಕ ಎಸೆದು, ಅವಾಚ್ಯವಾಗಿ ನಿಂದಿಸಿದ ಪ್ರಕರಣ

# 8 ಸಂಸದರು ರಾಜ್ಯಸಭೆಯಿಂದ ಸಸ್ಪೆಂಡ್

### ಕರ್ನಾಟಕದ ಸಂಸದ ನಾಸಿರ್ ಕೂಡ ಅಮಾನತು | ಸಸ್ಪೆಂಡ್ ಆದವರಿಂದ ಸಂಸತ್ ಆವರಣದಲ್ಲಿ ಅನಿರ್ದಿಷ್ಟ ಧರಣಿ

ನವದೆಹಲಿ: ರಾಜ್ಯಸಭೆಯಲ್ಲಿ ಭಾನುವಾರ ಕೃಷಿ ಮಸೂದೆಗಳ ಅಂಗೀಕಾರದ ವೇಳೆ 'ದುರ್ನಡತೆ' ತೋರಿದ ಕಾರಣ ಕರ್ನಾಟಕದ ಸದಸ್ಯ ಸೈಯದ್ ನಾಸಿರ್ ಹುಸೇನ್ ಸೇರಿದಂತೆ ಕಾಂಗ್ರೆಸ್, ಟಿಎಂಸಿ, ಆಪ್ ಹಾಗೂ ಸಿಪಿಎಂನ 8 ಸಂಸದರನ್ನು ರಾಜ್ಯಸಭೆಯ ಸಭಾಪತಿ ವೆಂಕಯ್ಯ ನಾಯ್ಡು ಮುಂಗಾರು ಅಧಿವೇಶನದ ಇನ್ನುಳಿದ ಅವಧಿಗೆ ಅಮಾನತು ಮಾಡಿದ್ದಾರೆ.


ನಾಸಿರ್ ಹುಸೇನ್

ಈ ಸಂಸದರು ಸಂಸತ್ತಿನ ಆವರಣದಲ್ಲಿ ದಿಂಬು, ಹೊದಿಕೆಯೊಂದಿಗೆ ಅನಿರ್ದಿಷ್ಟ ಧರಣಿ ಆರಂಭಿಸಿದ್ದಾರೆ. ಭಾನುವಾರದ ಕಲಾಪದಲ್ಲಿ ಪ್ರತಿಪಕ್ಷಗಳ ಸಂಸದರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಈ ಸಂಸದರು ದಾಖಲೆಗಳನ್ನು ಹರಿದು, ಮೇಜಿನ ಮೇಲೆ ಹತ್ತಿ, ಘೋಷಣೆಗಳನ್ನು ಕೂಗಿ, ಮೈಕ್ ಮುರಿದು, ಸದನದ ನಿಯಮಾವಳಿಯ ಪುಸ್ತಕವನ್ನು ಉಪಸಭಾಪತಿ ಹರಿವಂಶ್ ಅವರತ್ತ ಎಸೆದಿದ್ದರು. ಇವರನ್ನು ಅಮಾನತುಗೊಳಿಸಲು ಸೋಮವಾರ ಸರ್ಕಾರ ಗೊತ್ತುವಳಿ ಮಂಡಿಸಿತ್ತು. ಅದನ್ನು ಸದನ ಧ್ವನಿಮತದ ಮೂಲಕ ಅಂಗೀಕರಿಸಿದ್ದರಿಂದ ಕಾಂಗ್ರೆಸ್‌ನ ರಾಜೀವ್ ಸತಾವ್, ಸೈಯದ್ ನಾಸಿರ್ ಹುಸೇನ್ ಹಾಗೂ ರಿಪುನ್ ಬೋರಾ, ಟಿಎಂಸಿಯ ಡೆರೆಕ್ ಒ'ಬ್ರಿಯಾನ್ ಹಾಗೂ ಡೋಲಾ ಸೇನ್, ಸಿಪಿಎಂನ ಕೆ.ಕೆ. ರಾಗೇಶ್ ಹಾಗೂ ಇಳಮಾರನ್ ಕರೀಂ ಮತ್ತು ಆಪ್‌ನ ಸಂಜಯ್ ಸಿಂಗ್ ಅವರನ್ನು ಅಮಾನತುಗೊಳಿಸಲಾಯಿತು.

ಇದಕ್ಕೂ ಮುನ್ನ ಉಪಸಭಾಪತಿ ಹರಿವಂಶ್ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿ ಸದನದ ನಿಯಮಾವಳಿಗೆ ವಿರುದ್ಧವಾಗಿದ್ದ ಕಾರಣ ಅದನ್ನು ವೆಂಕಯ್ಯ ನಾಯ್ಡು ತಿರಸ್ಕರಿಸಿದರು. ಸದಸ್ಯರ ನಡತೆಯನ್ನು ತೀವ್ರ ತರಾಟೆ ತೆಗೆದುಕೊಂಡ ಅವರು, 'ಹರಿವಂಶ್ ಅವರು ತಮಗೆ ಸಂಸದರು ಅವಾಚ್ಯ ಪದ ಬಳಸಿ ನಿಂದಿಸಿದ್ದನ್ನು ಹಾಗೂ ಬೆದರಿಕೆ ಹಾಕಿದ್ದನ್ನು ನನಗೆ ತಿಳಿಸಿದ್ದಾರೆ. ಸದಸ್ಯರ ಈ ನಡತೆ ಖಂಡನೀಯ' ಎಂದು ಹೇಳಿದರು.

## 6 ಬೆಳೆಗಳ ಬೆಂಬಲ ಬೆಲೆ ಏರಿಸಿದ ಕೇಂದ್ರ

**ಯಾವ ಬೆಳೆಗೆ ಎಷ್ಟು ಬೆಂಬಲ ಬೆಲೆ?**
(ಕ್ವಿಂಟಲ್‌ಗೆ ರು.ಗಳಲ್ಲಿ)

| ಬೆಳೆ | ಈಗ | ಪರಿಷ್ಕೃತ | ಏರಿಕೆ |
|---|---|---|---|
| ಹೆಸರುಕಾಳು | 4875 | 5100 | 225 |
| ಮಸೂರ ಬೇಳೆ | 4800 | 5100 | 300 |
| ಸಾಸಿವೆ | 4425 | 4650 | 225 |
| ಕುಸುಬೆ | 5215 | 5327 | 112 |
| ಗೋಧಿ | 1925 | 1975 | 50 |
| ಬಾರ್ಲಿ | 1525 | 1600 | 75 |

ನವದೆಹಲಿ: ರಾಜ್ಯಸಭೆಯಲ್ಲಿ ಭಾನುವಾರವಷ್ಟೇ ಅಂಗೀಕಾರವಾರವಾದ 2 ಕೃಷಿ ಮಸೂದೆಗಳ ಬಗ್ಗೆ ರೈತ ಸಮುದಾಯ ಹಾಗೂ ಪ್ರತಿಪಕ್ಷಗಳಿಂದ ಆಕ್ರೋಶ ವ್ಯಕ್ತವಾಗುತ್ತಿರುವಾಗಲೇ, ಕೇಂದ್ರ ಸರ್ಕಾರ 6 ಹಿಂಗಾರು ಬೆಳೆಗಳ ಬೆಂಬಲ ಬೆಲೆಯನ್ನು ಶೇ.6ರಷ್ಟು ಏರಿಕೆ ಮಾಡಿದೆ. ತನ್ಮೂಲಕ ಬೆಂಬಲ ಬೆಲೆ ಆಧರಿತ ಖರೀದಿ ವ್ಯವಸ್ಥೆ ಮುಂದುವರಿಯಲಿದೆ ಎಂಬ ಸ್ಪಷ್ಟ ಸಂದೇಶವನ್ನು ರೈತರಿಗೆ ರವಾನಿಸಿದೆ. ಸರ್ಕಾರ ಅಂಗೀಕರಿಸಿದ ಹೊಸ ಕೃಷಿ ಮಸೂದೆಗಳಿಂದಾಗಿ ಇನ್ನು ಮುಂದೆ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಇರುವುದಿಲ್ಲ ಮತ್ತು ಅವುಗಳನ್ನು ಸರ್ಕಾರ ಖರೀದಿ ಮಾಡುವುದಿಲ್ಲ ಎಂಬ ಕಳವಳ ರೈತರಿಂದ ವ್ಯಕ್ತವಾಗಿತ್ತು. ಆದರೆ ಬೆನ್ನಲ್ಲೇ ಹಲವು ಕೃಷಿ ಉತ್ಪನ್ನಗಳ ಬೆಲೆಯನ್ನು ಕನಿಷ್ಠ 50 ರು.ನಿಂದ ಗರಿಷ್ಠ 300 ರು.ವರೆಗೆ ಏರಿಕೆ ಮಾಡಿ ಆದೇಶ ಹೊರಡಿಸಿದೆ. ಈ ಕುರಿತು ಸಂಪುಟ ಸಭೆಯಲ್ಲಿ ನಿರ್ಧರಿಸಿ ಸಂಸತ್ತಿಗೆ ತಿಳಿಸಲಾಗಿದೆ.

## ಸರ್ಕಾರದಿಂದ ವಿಡಿಯೋ ಸಾಕ್ಷ್ಯ



ನವದೆಹಲಿ: ಕೃಷಿ ಮಸೂದೆಯ ... ವಿಪಕ್ಷ ಸದಸ್ಯರು ಭಾನುವಾರ ರಾಜ್ಯಸಭೆ... ಯಾವ ರೀತಿ ಗದ್ದಲ ಎಬ್ಬಿಸಿದರು ಎಂ... ವಿವರಿಸುವ ಸಿಸಿಟೀವಿ ವಿಡಿಯೋ... ಸರ್ಕಾರ ಸೋಮವಾರ ಬಿಡುಗಡೆ ... ವಿಡಿಯೋದಲ್ಲಿ ವಿಪಕ್ಷಗಳ ಸಂಸದರು ... ಬಾವಿಗೆ ನುಗ್ಗಿ ಉಪಸಭಾಪತಿ ಹರಿವಂಶ್ ... ಬಳಿ ಇದ್ದ ಕಾಗದ ಪತ್ರಗಳನ್ನು ... ವುದು, ರಾಜ್ಯಸಭಾ ಸಿಬ್ಬಂದಿಯನ್ನು ... ವಾಗ್ವಾದ ನಡೆಸಿರುವುದು, ಮೈಕ್ರೋಫೋ... ಕಿತ್ತೆಸೆಯಲು ಯತ್ನಿಸಿರುವುದು ...

## ರೈತರು, ಕಾಂಗ್ರೆಸ್‌ನಿಂದ ರಾಷ್ಟ್ರವ್ಯಾಪಿ ಪ್ರತಿಭಟನೆ

ನವದೆಹಲಿ: ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ಎರಡು ಕೃಷಿ ಮಸೂದೆ ವಿರೋಧಿಸಿ ಕಾಂಗ್ರೆಸ್ ಸೆ.24ರಂದು ಮತ್ತು ಭಾರತೀಯ ಕಿಸಾನ್ ಒಕ್ಕೂಟ (ಬಿಕೆಯು) ಸೆ.25ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕರೆ ನೀಡಿವೆ. ಬಿಕೆಯು ಕರೆಗೆ ಎನ್‌ಟಿಯುಸಿ, ಎಐಟಿಯುಸಿ ಸೇರಿದಂತೆ ಸುಮಾರು 10 ಕೇಂದ್ರೀಯ ಕಾರ್ಮಿಕ ಒಕ್ಕೂಟಗಳ ಬೆಂಬಲ ನೀಡಿವೆ. ಸರ್ಕಾರದ ವಿರುದ್ಧ ಪತ್ರ ಸಮರ ನಡೆಸಲು ಕೂಡ ಕಾಂಗ್ರೆಸ್ ನಿರ್ಧರಿಸಿದೆ.

## ಸಹಿ ಹಾಕ್ಬೇಡಿ: ರಾಷ್ಟ್ರಪತಿಗೆ 18 ಪಕ್ಷಗಳಿಂದ ಪತ್ರ

ನವದೆಹಲಿ: ಸಂಸತ್ತಿನಲ್ಲಿ ಪಾಸಾಗಿರುವ 2 ಕೃಷಿ ಮಸೂದೆಗಳಿಗೆ ಸಹಿ ಹಾಕದಂತೆ ರಾಷ್ಟ್ರಪತಿಗಳನ್ನು ಕೋರಲು ಪ್ರತಿಪಕ್ಷಗಳು ತೀರ್ಮಾನಿಸಿವೆ. ಈ ಸಂಬಂಧ ರಾಮನಾಥ ಕೋವಿಂದ್ ಅವರಿಗೆ ಕಾಂಗ್ರೆಸ್, ಎಡರಂಗ, ಎನ್‌ಸಿಪಿ, ಡಿಎಂಕೆ, ಸಮಾಜವಾದಿ ಪಕ್ಷ, ಟಿಎಂಸಿ, ಆರ್‌ಜೆಡಿ ಸೇರಿ 18 ಪಕ್ಷಗಳು ಪತ್ರ ಬರೆದಿವೆ.